1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ. ಹೆಚ್. ಪೂಜಾರ ಇವರು ಮಂಡಿಸಿರುವ ಶೂನ್ಯವೇಳೆ ಪ್ರಸ್ತಾವನೆಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರ ಉತ್ತರ.**

**ವಿಷಯ:** ಕರ್ನಾಟಕ ರಾಜ್ಯ ಹಿರಿಯ ನಾಗರಿಕ ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘ, (ರಿ) ಹುಬ್ಬಳ್ಳಿ-ಬೆಂಗಳೂರು ಇವರ ವತಿಯಿಂದ ದಿನಾಂಕ:16.12.2025 ಮಂಗಳವಾರದಂದು ಬೆಳಗಾವಿಯಲ್ಲಿ ನಡೆಯುತ್ತಿರುವ ಧರಣಿ ಸತ್ಯಾಗ್ರಹದ ಕುರಿತು.

ಭಾರತ ಸಂವಿಧಾನ ನಿರ್ದೇಶಿತ ತಂದೆ, ತಾಯಿ, ಹಿರಿಯ ನಾಗರೀಕರ ಪಾಲನೆ ಮತ್ತು ಪೋಷಣೆ, ಕಲ್ಯಾಣ ಅಧಿನಿಯಮ 2007 ರ ಪ್ರಕಾರ ಹಿರಿಯ ನಾಗರಿಕರಿಗೆ ಅವಶ್ಯಕ ಮೂಲಭೂತ ಸೌಲಭ್ಯ ಒದಗಿಸುವುದು. ಹಿರಿಯರ ಆಸ್ತಿ, ಜೀವ ರಕ್ಷಣೆ, ಸಾಮಾಜಿಕ ಭದ್ರತೆಯಲ್ಲಿ ಅವಶ್ಯವಾದ ವೃದ್ಯಾಪ್ಯ ವೇತನ ನೀಡುವುದು ಸರ್ಕಾರದ ಕರ್ತವ್ಯವಾಗಿದ್ದು, ಆದರೆ ಈ ಕಾನೂನು ಜಾರಿಯಾಗಿ 16 ವರ್ಷ ಕಳೆದರೂ ಕಾನೂನು ಬದ್ಧ ಹಿರಿಯ ನಾಗರಿಕರ ಅನೇಕ ಸೌಲಭ್ಯಗಳು ದೊರಕುತ್ತಿಲ್ಲ. ಬದಲಾಗಿ ಇರುವ ಸೌಲಭ್ಯಗಳನ್ನು ಸರ್ಕಾರ ಮೊಟಕುಗೊಳಿಸಿ ಹಿರಿಯರನ್ನು ನಿರ್ಲಕ್ಷ್ಯ ಮಾಡಲಾಗುತ್ತಿದೆ ಎಂದು ಹಿರಿಯರು ಧರಣಿ ಮಾಡುತ್ತಿರುವುದು ನಿಜಕ್ಕೂ ದೊಡ್ಡ ದುರ್ದೈವ ಮತ್ತು ನೋವಿನ ಸಂಗತಿಯಾಗಿದೆ.

ಸರ್ಕಾರಗಳು ಹಿರಿಯರನ್ನು ಧರಣಿ, ಹೋರಾಟ ಮಾಡಲು ಬಿಡದಂತೆ ನೋಡಿಕೊಂಡು, ಹಿರಿಯರಿಗೆ ಸಿಗಬೇಕಾದ ಅವರ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸರ್ಕಾರಗಳು ಕ್ರಮಕೈಗೊಳ್ಳಲಿ ಎಂಬ ಬೇಡಿಕೆಗಳು ನ್ಯಾಯಯುತವಾಗಿದೆ. ಹಿರಿಯ ನಾಗರಿಕರು ಈಗ ರಾಷ್ಟ್ರದಲ್ಲಿ ಸುಮಾರು 20 ಕೋಟಿ ಇದ್ದರೆ, ರಾಜ್ಯದಲ್ಲಿ 80 ಲಕ್ಷ ಇದ್ದಾರೆ. ಇವರೆಲ್ಲರೂ ಸಂಘಟನೆ ಮೂಲಕ ಈ ಸಂಘವು ಕಳೆದ 18 ವರ್ಷಗಳಿಂದ ನಿರಂತರವಾಗಿ ಹೋರಾಟ ಮಾಡಲಾಗುತ್ತಿದೆ ಎಂದು ಹಿರಿಯರು ಹೇಳಿದ್ದಾರೆ. ಅವರ ಸಮಸ್ಯೆ ಪರಿಹರಿಸಲು ಹಿರಿಯರು ಹಾಗೂ ವೇದಿಕೆಯ ಪದಾಧಿಕಾರಿಗಳು ಸಂಬಂಧಪಟ್ಟ ಮಾನ್ಯ ಸಚಿವರ ಜೊತೆಗೆ 2 ಬಾರಿ ಚರ್ಚೆ ಮಾಡಿದ್ದರೂ ಸಹ ಸಚಿವರು ಮೌನವಾಗಿದ್ದಾರೆ ಎಂದು ಹಿರಿಯರು ಬೇಸರ ವ್ಯಕ್ತಪಡಿಸಿದ್ದಾರೆ.

ಈ ಎಲ್ಲಾ ವಿಚಾರಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ, ಹಿರಿಯ ನಾಗರಿಕರ ಬೇಡಿಕೆಗಳನ್ನು ಈಡೇರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಹಿರಿಯರ ರಕ್ಷಣೆಗಾಗಿ ಸರ್ಕಾರ ನಿಲ್ಲಬೇಕು ಎಂಬ ವಿಷಯದ ಕುರಿತು.

*****

ಕರ್ನಾಟಕದ ರಾಜ್ಯದಲ್ಲಿ 2011ರ ಜನಗಣತಿಯಂತೆ 57.91 ಲಕ್ಷ ಹಿರಿಯ ನಾಗರಿಕರು ಇರುತ್ತಾರೆ. ಪ್ರಸ್ತುತ ಅಂದಾಜು 80 ಲಕ್ಷ ಹಿರಿಯ ನಾಗರಿಕರು ಇರುತ್ತಾರೆ.

- **ಒಕ್ಕೂಟ ರಾಷ್ಟ್ರಗಳು 1999-2000ನೇ ವರ್ಷವನ್ನು ವಯಸ್ಸಾದ ವ್ಯಕ್ತಿಗಳ ಅಂತರರಾಷ್ಟ್ರೀಯ ವರ್ಷವೆಂದು ಘೋಷಿಸಿದೆ ಇದರ ಅನುಸಾರ ಭಾರತ ಸರ್ಕಾರವು ಹಿರಿಯ ನಾಗರಿಕರಿಗೆ ಒಂದು ರಾಷ್ಟ್ರೀಯ ನೀತಿಯನ್ನು ರೂಪಿಸಿದೆ. ಈ ರಾಜ್ಯ ನೀತಿಯ ಮುಖ್ಯ ಉದ್ದೇಶ ಹಿರಿಯ ನಾಗರಿಕರಿಗೆ ಒಳಿತನ್ನು ಕಾಪಾಡುವುದೇ ಇದರ ಮುಖ್ಯ ಗುರಿಯಾಗಿದೆ.**

- ಹಿರಿಯ ನಾಗರಿಕರ ರಾಷ್ಟ್ರ ನೀತಿಯ ಸಮರ್ಪಕ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರವು 2007 ರಲ್ಲಿ ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆಯನ್ನು ದಿನಾಂಕ:29-12-2007ರಂದು ಪ್ರಕಟಿಸಲಾಗಿದ್ದು, ರಾಜ್ಯದಲ್ಲಿ ದಿನಾಂಕ:01-04-2008 ರಿಂದ ಜಾರಿಗೊಳಿಸಲಾಗಿದೆ.

- ತಂದೆ ತಾಯಿಯರ ಮತ್ತು ಹಿರಿಯ ನಾಗರಿಕರ ಪಾಲನೆ, ಪೋಷಣೆ ಮತ್ತು ಕಲ್ಯಾಣ ನಿಯಮಾವಳಿಗಳು-2009 ಅನ್ನು ದಿನಾಂಕ:19-11-2009ರಲ್ಲಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

- ಭಾರತ ಸರ್ಕಾರವು 2007ರಲ್ಲಿ ಜಾರಿಗೆ ತಂದ **ಪಾಲಕರ ಮತ್ತು ಹಿರಿಯ ನಾಗರಿಕರ ಪಾಲನೆ-ಪೋಷಣೆ ಮತ್ತು ಕಲ್ಯಾಣ ಕಾಯ್ದೆ**ಯ ಮುಖ್ಯ ಉದ್ದೇಶವು, ವಯೋವೃದ್ಧರು ಮತ್ತು ಪಾಲಕರಿಗೆ ಅವರ ಮಕ್ಕಳ/ಸಂಬಂಧಿಕರಿಂದ ಕಾನೂನುಬದ್ಧ ರಕ್ಷಣೆ ಮತ್ತು ಅಗತ್ಯ ನೆರವು ದೊರಕುವಂತೆ ಮಾಡುವುದಾಗಿದೆ. ಕುಟುಂಬ ವ್ಯವಸ್ಥೆಯ ಬದಲಾವಣೆ ಮತ್ತು ನಗರೀಕರಣದ ಹೆಚ್ಚಳದಿಂದ ಹಿರಿಯರ ನಿರ್ಲಕ್ಷ್ಯ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಕಾಯ್ದೆ ಅತಿ ಮಹತ್ವದ್ದಾಗಿದೆ.

**1. ಈ ಕಾಯ್ದೆಯ ಮುಖ್ಯ ಉದ್ದೇಶಗಳು:**

- ಹಿರಿಯ ನಾಗರಿಕರು ಮತ್ತು ಪಾಲಕರು **ಮಾನವೀಯ ಜೀವನ** ನಡೆಸಲು ಅಗತ್ಯವಾದ ಪೋಷಣೆ ಸಿಗುವಂತೆ ಮಾಡುವುದು.
- ಮಕ್ಕಳಿಂದ ಅಥವಾ ಸಂಬಂಧಿಕರಿಂದ ಅಪೇಕ್ಷಿತ ಬೆಂಬಲ ದೊರಕದಿದ್ದಲ್ಲಿ ಕಾನೂನು ಬದ್ಧವಾಗಿ **ಮಾಸಾಶನ (maintenance)** ಪಡೆಯುವ ವ್ಯವಸ್ಥೆ.
- ಹಿರಿಯರ ಮೇಲೆ ನಡೆಯುವ **ಹಿಂಸೆ, ಶೋಷಣೆ ಮತ್ತು ನಿರ್ಲಕ್ಷ್ಯದಿಂದ ರಕ್ಷಣೆ** ನೀಡುವುದು.
- ರಾಜ್ಯ ಸರ್ಕಾರಗಳಿಂದ ಹಿರಿಯರ ಕಲ್ಯಾಣಕ್ಕಾಗಿ **ವೃದ್ಧಾಶ್ರಮಗಳು, ಆರೈಕೆ ಕೇಂದ್ರಗಳು** ಇತ್ಯಾದಿಗಳ ಸ್ಥಾಪನೆ.

**2. ಕಾಯ್ದೆಯ ಪ್ರಮುಖ ಅಂಶಗಳು:**

(a) ಹಿರಿಯ ನಾಗರಿಕರು ಅಥವಾ ಪಾಲಕರು ತಮ್ಮ ಜೀವನೋಪಾಯಕ್ಕಾಗಿ ತಮ್ಮ ಮಕ್ಕಳ ವಿರುದ್ಧ ಅಥವಾ ಸಂಬಂಧಿಕರ ವಿರುದ್ಧ ಪಾಲನೆ-ಪೋಷಣೆಗಾಗಿ ಅರ್ಜಿ ಸಲ್ಲಿಸಬಹುದು. ಹಿರಿಯರ ಗುಂಪು (parents/senior citizens) ಪರವಾಗಿ ಮೂರನೇ ವ್ಯಕ್ತಿಯು ಕೂಡ ಅರ್ಜಿ ಸಲ್ಲಿಸಬಹುದು.

(b) ಈ ಕಾಯ್ದೆಯ **ನಿರ್ವಹಣಾ ನ್ಯಾಯಮಂಡಳಿ (Maintenance Tribunal) ಯ ಅಧ್ಯಕ್ಷರು ಉಪ ವಿಭಾಗಾಧಿಕಾರಿಗಳಾಗಿದ್ದು**, ಹಿರಿಯರಿಂದ ಬಂದ ದೂರುಗಳನ್ನು ಪರಿಶೀಲಿಸಿ ಹಿರಿಯರ ಪೋಷಣೆಗಾಗಿ ಪ್ರಕರಣಕ್ಕೆ ಅನುಸಾರವಾಗಿ ಆದೇಶಗಳನ್ನು ಹೊರಡಿಸುತ್ತಾರೆ. ಕೆಲವು ಪ್ರಕರಣಗಳಲ್ಲಿ ಹಿರಿಯರಿಗಾಗಿ ಗರಿಷ್ಠ **₹10,000/-**ಗಳಷ್ಟು ನಿರ್ವಹಣಾ ಭತ್ಯೆಯನ್ನು ನೀಡುವಂತೆ ಹೊರಡಿಸುತ್ತಾರೆ.

(c) **ಉಪ ವಿಭಾಗಾಧಿಕಾರಿಗಳ ನಿರ್ವಹಣಾ ನ್ಯಾಯ ಮಂಡಳಿಯ ತೀರ್ಪಿಗೆ ಅಸಮಾಧಾನವಿದ್ದರೆ ಉಪ ವಿಭಾಗಾಧಿಕಾರಿಗಳು ಹೊರಡಿಸಿದ ಆದೇಶಗಳ ಮೇಲೆ ಜಿಲ್ಲಾಧಿಕಾರಿಗಳ ನ್ಯಾಯಮಂಡಳಿಯಲ್ಲಿ ಅಪೀಲು ಸಲ್ಲಿಸಬಹುದು.**

- ಹಿರಿಯರ ಮೇಲೆ ನಡೆಯುವ ದೌರ್ಜನ್ಯ, ಆರ್ಥಿಕ ಶೋಷಣೆ, ಮಾನಸಿಕ ಹಿಂಸೆ, ಕಿರುಕುಳ ಇತ್ಯಾದಿಗಳನ್ನು ತಡೆಯಲು **ಪೊಲೀಸ್ ಮತ್ತು ಜಿಲ್ಲಾ ಆಡಳಿತಕ್ಕೆ ವಿಶೇಷ ಅಧಿಕಾರ** ನೀಡಲಾಗಿದೆ.
- ಕುಟುಂಬದವರಿಂದ ಹೊರಹಾಕುವ ಪ್ರಯತ್ನ, ಆಸ್ತಿ-ಪಾಸ್ತಿನ ದುರುಪಯೋಗ ಇತ್ಯಾದಿಗಳ ವಿರುದ್ಧ ಕೂಡ ಕಾನೂನುಬದ್ಧ ರಕ್ಷಣೆ ನೀಡಲಾಗುತ್ತದೆ.
- ಕಾಯ್ದೆಯಲ್ಲಿ ನಿರ್ಗತಿಕ ಹಿರಿಯರಿಗಾಗಿ ವೃದ್ಧಾಶ್ರಮಗಳನ್ನು ಸ್ಥಾಪಿಸುವ ಬಗ್ಗೆ ತಿಳಿಸಲಾಗಿರುತ್ತದೆ.

ಈ ಮೇಲಿನ ಕಾಯ್ದೆ ಮತ್ತು ನಿಯಮಾವಳಿಗಳ ಜೊತೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರವು ಹಿರಿಯ ನಾಗರಿಕರಿಗಾಗಿ ವಿವಿಧ ಇಲಾಖೆಗಳ ಮೂಲಕ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು, ಆ ಇಲಾಖೆಗಳು ಸಂಬಂಧಿತ ಯೋಜನೆಗಳನ್ನು ಹಿರಿಯ ನಾಗರಿಕರಿಗೆ ತಲುಪಿಸುವ ಮೂಲಕ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುತ್ತಿವೆ.

**ಹಿರಿಯ ನಾಗರಿಕರ ಕ್ಷೇಮಾಭಿವೃದ್ಧಿಗಾಗಿ ರಾಜ್ಯ ಸರ್ಕಾರದಿಂದ ಹಮ್ಮಿಕೊಂಡಿರುವ ಯೋಜನೆಗಳು:**

**1. ಕೇಂದ್ರ ಮತ್ತು ರಾಜ್ಯ ಅನುದಾನಿತ ವೃದ್ಧಾಶ್ರಮಗಳು:**

- ರಾಜ್ಯದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಿರ್ಗತಿಕ ಹಿರಿಯ ನಾಗರಿಕರಿಗಾಗಿ ಕೇಂದ್ರ ಸರ್ಕಾರದ ಅನುದಾನದಡಿ 41 ವೃದ್ಧಾಶ್ರಮಗಳು ಕಾರ್ಯನಿರ್ವಹಿಸುತ್ತಿರುತ್ತವೆ. (ವಾರ್ಷಿಕವಾಗಿ 25 ಫಲಾನುಭವಿಗಳ ಒಂದು ವೃದ್ಧಾಶ್ರಮಕ್ಕೆ ರೂ.25.00 ಲಕ್ಷಗಳನ್ನು ನೀಡಲಾಗುತ್ತಿದೆ.)
- ರಾಜ್ಯದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಿರ್ಗತಿಕ ಹಿರಿಯ ನಾಗರಿಕರಿಗಾಗಿ ರಾಜ್ಯ ಸರ್ಕಾರದ ಅನುದಾನದಡಿ 65 (ಜಿಲ್ಲೆಗೆ ಒಂದರಂತೆ 29 ಮತ್ತು ಕಂದಾಯ ಉಪವಿಭಾಗಕ್ಕೆ ಒಂದರಂತೆ 36) ವೃದ್ಧಾಶ್ರಮಗಳು ಕಾರ್ಯನಿರ್ವಹಿಸುತ್ತಿರುತ್ತವೆ. (ವಾರ್ಷಿಕವಾಗಿ 25 ಫಲಾನುಭವಿಗಳ ಒಂದು ವೃದ್ಧಾಶ್ರಮಕ್ಕೆ ರೂ. 12.00 ಲಕ್ಷಗಳನ್ನು ನೀಡಲಾಗುತ್ತಿದೆ.)

**2. ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು:**

ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲರಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ರಾಜ್ಯ ಅನುದಾನದಡಿ ಸ್ವಯಂಸೇವಾ ಸಂಸ್ಥೆಗಳ ಮೂಲಕ ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ 28 ಜಿಲ್ಲೆಗಳಲ್ಲಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುತ್ತವೆ. ಹಿರಿಯ ನಾಗರಿಕರ ಸಹಾಯವಾಣಿ ಟೋಲ್‌ಫ್ರೀ ಸಂಖ್ಯೆ 1090 ಮತ್ತು 14567 ಸಂಖ್ಯೆಯು ಕಾರ್ಯನಿರ್ವಹಿಸುತ್ತಿದೆ.
(ವಾರ್ಷಿಕವಾಗಿ ಪ್ರತಿ ಕೇಂದ್ರಕ್ಕೆ ರೂ. 8.75 ಲಕ್ಷಗಳನ್ನು ನೀಡಲಾಗುತ್ತಿದೆ.)

**3. ಹಿರಿಯ ನಾಗರಿಕರಿಗಾಗಿ ಹಗಲು ಯೋಗಕ್ಷೇಮ ಕೇಂದ್ರಗಳು:**

ರಾಜ್ಯ ಅನುದಾನದಡಿ ಸ್ವಯಂಸೇವಾ ಸಂಸ್ಥೆಗಳ ಮೂಲಕ ಪ್ರಸ್ತುತ 26 ಜಿಲ್ಲೆಗಳಲ್ಲಿ (ಬೆಂಗಳೂರು ನಗರ ಜಿಲ್ಲೆ 02 ಸೇರಿದಂತೆ) 27 ಹಗಲು ಯೋಗಕ್ಷೇಮ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿರುತ್ತವೆ. (ವಾರ್ಷಿಕವಾಗಿ ಪ್ರತಿ ಕೇಂದ್ರಕ್ಕೆ ರೂ.10.00 ಲಕ್ಷಗಳನ್ನು ನೀಡಲಾಗುತ್ತಿದೆ.)

**4. ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳು:**

60 ವರ್ಷ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರು ಗುರುತಿನ ಚೀಟಿ ಪಡೆಯಲು ಸೇವಾಸಿಂಧು ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದ್ದು, ದಿ:01.10.2018ರಿಂದ ಹಿರಿಯ ನಾಗರಿಕರು ಸೇವಾಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ಪಡೆಯಬಹುದಾಗಿದೆ.

**5. ಕಂದಾಯ ಇಲಾಖೆ ಮೂಲಕ ಹಿರಿಯ ನಾಗರಿಕರಿಗಾಗಿ ಇಂದಿರಾಗಾಂಧಿ ಹಾಗೂ ರಾಷ್ಟ್ರೀಯ ವೃದ್ಧಾಪ್ಯ ವೇತನ ಹಾಗೂ ಸಂಧ್ಯಾ ಸುರಕ್ಷಾ ಯೋಜನೆಯಡಿ ವೃದ್ಧಾಪ್ಯ ವೇತನ ನೀಡಲಾಗುತ್ತಿರುತ್ತದೆ.**

- ವೃದ್ಧಾಪ್ಯ ಪಿಂಚಣಿ ಯೋಜನೆಯಡಿ 60-64 ವರ್ಷದ ಹಿರಿಯ ನಾಗರಿಕರಿಗಾಗಿ ರೂ.600/-ಗಳು ಹಾಗೂ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗಾಗಿ ರೂ.1200/-ಗಳನ್ನು ನೀಡಲಾಗುತ್ತಿದೆ.
- ಸಂಧ್ಯಾ ಸುರಕ್ಷಾ ಯೋಜನೆಯಡಿ 65 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗಾಗಿ ರೂ.1200/-ಗಳನ್ನು (ರಾಜ್ಯ ಸರ್ಕಾರದ ವತಿಯಿಂದ) ನೀಡಲಾಗುತ್ತಿದೆ.

**6.** ಸಾರಿಗೆ ಇಲಾಖೆಯ ಮೂಲಕ ಹಿರಿಯ ನಾಗರಿಕರಿಗೆ ಬಸ್ ಪ್ರಯಾಣ ದರದಲ್ಲಿ ಶೇ.25ರಷ್ಟು ರಿಯಾಯಿತಿ ನೀಡಲಾಗುತ್ತಿದೆ.

**7.** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೂಲಕ ರಾಜ್ಯದ ಎಲ್ಲಾ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ 10 ಹಾಸಿಗೆಗಳನ್ನು ಹಿರಿಯ ನಾಗರಿಕರಿಗಾಗಿ ಮೀಸಲಿರಿಸಿ ಜೀರಿಯಾಟ್ರಿಕ್ ವಾರ್ಡ್ ಗಳನ್ನಾಗಿ ಮಾಡಲಾಗಿರುತ್ತದೆ.

**8.** ರಾಜ್ಯ ಸರ್ಕಾರದ ಮೂಲಕ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗಾಗಿ ಪ್ರತಿ ವರ್ಷ ರಾಜ್ಯ ಪ್ರಶಸ್ತಿಯನ್ನು (06 ವೈಯಕ್ತಿಕ ಹಾಗೂ 01 ಸ್ವಯಂ ಸೇವಾಸಂಸ್ಥೆ) ನೀಡಲಾಗುತ್ತದೆ.

ಮೇಲ್ಕಂಡ ಕಾರ್ಯಕ್ರಮದ ಜೊತೆಗೆ ದಿನಾಂಕ:24.11.2025 ರಂದು ಕಾನೂನು ಆಯೋಗದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಹಾಗೂ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳ ಸಹಯೋಗದಲ್ಲಿ ರಾಜ್ಯಮಟ್ಟದಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ, ಎಲ್ಲಾ ಕಂದಾಯ ಉಪವಿಭಾಗಾಧಿಕಾರಿಗಳಿಗೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರುಗಳಿಗೆ ಮತ್ತು ಇಲಾಖೆಯ ಜಿಲ್ಲಾ ಮಟ್ಟದ ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳಿಗೆ ಹಾಗೂ ಹಿರಿಯ ನಾಗರಿಕರ ಆಯ್ದ ಸಂಘ ಸಂಸ್ಥೆಗಳಿಗೆ ಹಿರಿಯ ನಾಗರಿಕರ ಕಾಯ್ದೆಯ ಅನುಷ್ಠಾನ, ಸವಾಲುಗಳು ಮತ್ತು ಶಿಫಾರಸ್ಸುಗಳ ಕುರಿತು ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಗಿರುತ್ತದೆ.

**ಕರ್ನಾಟಕ ರಾಜ್ಯ ಹಿರಿಯ ನಾಗರಿಕ ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘ, (ರಿ) ಹುಬ್ಬಳ್ಳಿ-ಬೆಂಗಳೂರು ಇವರ ವತಿಯಿಂದ ದಿನಾಂಕ:16.12.2025ರಂದು ಬೆಳಗಾವಿಯಲ್ಲಿ ಈ ಕೆಳಕಂಡ ಬೇಡಿಕೆಗಳ ಕುರಿತು ಧರಣಿ ನಡೆಸುವುದಾಗಿ ತಿಳಿಸಿರುವ ಅಂಶಗಳಿಗೆ ಕೈಗೊಂಡಿರುವ ಕ್ರಮಗಳ ವಿವರ:**

| ಕ್ರ ಸಂ | ಬೇಡಿಕೆಗಳು | ಕೈಗೊಂಡ ಕ್ರಮಗಳು |
|---|---|---|
| 1 | ಎಲ್ಲ ಹಿರಿಯ ನಾಗರಿಕರು ರಾಷ್ಟ್ರದ ಸಂಪತ್ತು ಎಂದು ಘೋಷಣೆ ಮಾಡಲು ಕ್ರಮ ಕೈಗೊಳ್ಳುವುದು (ಕೇಂದ್ರ ಸರಕಾರಕ್ಕೆ ಈ ಬೇಡಿಕೆ ಸಲ್ಲಿಸಿದೆ) | ಹಿರಿಯ ನಾಗರಿಕರು ರಾಷ್ಟ್ರದ ಸಂಪತ್ತು ಎಂದು ಘೋಷಣೆ ಮಾಡುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪತ್ರಿಸಲಾಗುವುದು. |
| 2 | ಆರ್ಥಿಕವಾಗಿ ದುರ್ಬಲರಾದ (ಬಿ.ಪಿ.ಎಲ್.) ಹಿರಿಯ ನಾಗರಿಕರಿಗೆ ಮಾಸಿಕ ರೂ. 10 ಸಾವಿರ ವೃದ್ಧಾಪ್ಯ ವೇತನ (ಪೆನ್‌ಶನ್) ನೀಡಬೇಕು. (ರಾಜ್ಯ ಸರಕಾರ 5 ಸಾವಿರ, ಕೇಂದ್ರ ಸರಕಾರ 5 ಸಾವಿರ) | ಈ ಬಗ್ಗೆ ಈಗಾಗಲೇ ದಿನಾಂಕ:25.08.2025ರ ಅರೆ ಸರ್ಕಾರಿ ಪತ್ರದಲ್ಲಿ ಇಲಾಖಾ ಕಾರ್ಯದರ್ಶಿಗಳು ಹಿರಿಯ ನಾಗರಿಕರಿಗೆ ಮಾಸಿಕ ವೃದ್ಧಾಪ್ಯ ವೇತನವನ್ನು ರೂ.5,000/-ಗಳಿಗೆ ಹೆಚ್ಚಿಸುವುದರ ಬಗ್ಗೆ ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರಿಸಿರುತ್ತಾರೆ. |

| | | |
|---|---|---|
| 3 | ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಸಚಿವಾಲಯ ಸಚಿವರು ಹಾಗೂ ಬಜೆಟ್ ಮಂಡನೆಯಾಗಬೇಕು. | ವಿಕಲಚೇತನರು ಹಾಗೂ ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ನಿರ್ದೇಶನಾಲಯವಿರುತ್ತದೆ. |
| 4 | ಹಿರಿಯ ನಾಗರಿಕರ ಕಾನೂನಲ್ಲಿರುವ ಸೌಲಭ್ಯಗಳಾದ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಚಿಕಿತ್ಸಾ ವಿಭಾಗ ಆರಂಭಿಸಬೇಕು. | ಈ ಬಗ್ಗೆ ಈಗಾಗಲೇ ದಿನಾಂಕ:31.07.2025ರ ಅರೆ ಸರ್ಕಾರಿ ಪತ್ರಗಳಲ್ಲಿ ಇಲಾಖಾ ಕಾರ್ಯದರ್ಶಿಗಳು ರಾಜ್ಯದಲ್ಲಿ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಿರಿಯ ನಾಗರಿಕರಿಗೆ ಪ್ರತ್ಯೇಕ ನೋಂದಣಿ, ಔಷಧಿ ವಿತರಣಾ ಸರತಿ ಸಾಲುಗಳು, ಆದ್ಯತೆ ಮೇರೆಗೆ ಚಿಕಿತ್ಸೆ ನೀಡುವಂತೆ ಹಾಗೂ ಎಲ್ಲಾ ಜಿಲ್ಲಾಮಟ್ಟದ ಸರ್ಕಾರಿ ಆಸ್ಪತ್ರೆಗಳಲ್ಲಿ ಜೀರಿಯಾಟ್ರಿಕ್ ಕೇಂದ್ರಗಳನ್ನು ಸ್ಥಾಪಿಸಿ, ಅವುಗಳ ನಿರ್ವಹಣೆಗೆ ಅಗತ್ಯವಿರುವ ವೈದ್ಯ ಸಿಬ್ಬಂದಿ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಬಗ್ಗೆ ಅಗತ್ಯಕ್ರಮ ಕೈಗೊಳ್ಳುವಂತೆ ಕೋರಿ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗೆ ಪತ್ರಿಸಲಾಗಿರುತ್ತದೆ. |
| 5 | ಹಿರಿಯ ನಾಗರಿಕರ ಕಾನೂನಿನಂತೆ ಎಲ್ಲ ಪೊಲೀಸ್ ಠಾಣೆಯಲ್ಲಿ ಹಿರಿಯ ನಾಗರಿಕರ ಸಮಿತಿ ರಚಿಸಬೇಕು. | ಈ ಬಗ್ಗೆ ಈಗಾಗಲೇ ದಿನಾಂಕ:31.07.2025ರ ಅರೆ ಸರ್ಕಾರಿ ಪತ್ರದಲ್ಲಿ ಇಲಾಖಾ ಕಾರ್ಯದರ್ಶಿಗಳು Maintenance and welfare of Parents and Senior Citizens Act-2007 ಕಾಯ್ದೆ ಪ್ರಕಾರ ಹಿರಿಯ ನಾಗರಿಕರ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಸಮನ್ವಯ ಸಮಿತಿ ರಚನೆ ಮತ್ತು ಸಭೆಗಳನ್ನು ನಿಯಮಿತವಾಗಿ ನಡೆಸುವುದರ ಬಗ್ಗೆ ಪೊಲೀಸ್ ಇಲಾಖೆಗೆ ಸೂಕ್ತವಾದ ಆದೇಶ ಹೊರಡಿಸುವಂತೆ ಕೋರಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆಗೆ ಪತ್ರಿಸಲಾಗಿರುತ್ತದೆ. ಇದರ ಜೊತೆಗೆ ದಿನಾಂಕ:24.11.2025 ರಂದು ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ-2007ನ್ನು ಅನುಷ್ಠಾನಗೊಳಿಸಲು, ಸವಾಲುಗಳು ಮತ್ತು ಶಿಫಾರಸ್ಸು ಕುರಿತು ಒಂದು ದಿನದ ಕಾರ್ಯಾಗಾರವನ್ನು ನಡೆಸಲಾಗಿದ್ದು, ಸದರಿ ಕಾರ್ಯಾಗಾರದಲ್ಲಿಯೂ ಸಹ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದು, ಅವರಿಗೂ ಸಹ ಕಾನೂನು ಆಯೋಗದ ಅಧ್ಯಕ್ಷರು ಈ ಬಗ್ಗೆ ಕ್ರಮ ವಹಿಸಲು ತಿಳಿಸಿರುತ್ತಾರೆ. |
| 6 | ಎಲ್ಲ ಹಿರಿಯ ನಾಗರಿಕರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ನೀಡುವುದು. ಈಗ ಮಹಿಳಾ ಹಿರಿಯ ನಾಗರಿಕರಿಗೆ ಮಾತ್ರ ನೀಡಲಾಗಿದೆ. | ಈ ಬಗ್ಗೆ ಈಗಾಗಲೇ ದಿನಾಂಕ:31.07.2025ರ ಅರೆ ಸರ್ಕಾರಿ ಪತ್ರದಲ್ಲಿ ಇಲಾಖಾ ಕಾರ್ಯದರ್ಶಿಗಳು ರಾಜ್ಯದಲ್ಲಿ ಪುರುಷ ಹಿರಿಯ ನಾಗರಿಕರಿಗೂ ಸರ್ಕಾರಿ ಬಸ್‌ಗಳಲ್ಲಿ ಉಚಿತಬಸ್ಪ್ರಯಾಣದ ಅವಕಾಶ ನೀಡುವ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿ ಸರ್ಕಾರದ ಕಾರ್ಯದರ್ಶಿಗಳು, ಸಾರಿಗೆ ಇಲಾಖೆಗೆ ಪತ್ರಿಸಲಾಗಿರುತ್ತದೆ. |

| | | |
|---|---|---|
| 7 | ವೃದ್ಧಾಪ್ಯ ವೇತನ ಮಂಜೂರಾತಿ ಆದಾಯ ಮಿತಿಯನ್ನು ಮೊದಲಿನಂತೆ 1 ಲಕ್ಷ 20 ಸಾವಿರ (ಬಿ.ಪಿ.ಎಲ್) ಕ್ಕೆ ಹೆಚ್ಚಿಸುವುದು. ಈಗ 33 ಸಾವಿರ ಇದೆ. | ವೃದ್ಧಾಪ್ಯವೇತನ ಮಂಜೂರಾತಿ ಆದಾಯ ಮಿತಿಯನ್ನು 1.20 ಲಕ್ಷಕ್ಕೆ (ಬಿ.ಪಿ.ಎಲ್) ಗೆ ಹೆಚ್ಚಿಸುವ ಕುರಿತ ಬೇಡಿಕೆಯ ಮನವಿಯನ್ನು ಸರ್ಕಾರದ ಮೂಲಕ ಕಂದಾಯ ಇಲಾಖೆಗೆ ಸಲ್ಲಿಸಲು ಕ್ರಮವಹಿಸಲಾಗುತ್ತದೆ. |
| 8 | ನಿವೃತ್ತ ರಾಜ್ಯ ಸರಕಾರಿ ನೌಕರರಿಗೆ ದೊರಕಬೇಕಾದ 7ನೇ ವೇತನ ಆಯೋಗದ 2ನೇ ಭಾಗವನ್ನು ಬಿಡುಗಡೆಮಾಡಬೇಕು. | ಈ ಬಗ್ಗೆ ಸೂಕ್ತ ಕ್ರಮಕ್ಕೆ ಸಂಬಂಧಿಸಿದ ಇಲಾಖೆಗಳಿಗೆ ಪತ್ರಿಸಲಾಗುವುದು. |
| 9 | ತಡೆಹಿಡಿದ ಹಿರಿಯ ನಾಗರಿಕರ ರೈಲ್ವೆ ರಿಯಾಯತಿಯನ್ನು ಆರಂಭಿಸಬೇಕು. | ಸದರಿ ಬೇಡಿಕೆಯಲ್ಲಿರುವ ವಿಷಯವು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದಾಗಿದ್ದು, ಈ ಬಗ್ಗೆ ರಾಜ್ಯ ಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲು ಕ್ರಮ ವಹಿಸಲಾಗುತ್ತದೆ. |
| 10 | ಜಿಲ್ಲೆಗೊಂದು ಹಿರಿಯ ನಾಗರಿಕರ ಭವನ ನಿರ್ಮಿಸುವುದು. | ಈ ಬಗ್ಗೆ ಪರಿಶೀಲಿಸಲಾಗುತ್ತಿದೆ. |

**ಸಂಖ್ಯೆ:** ಮಮಇ 439 ಪಿಹೆಚ್‌ಪಿ 2025

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
,ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು